ತುರುವೇಕೆರೆ ತಾಲ್ಲೂಕಿನ ಗ್ರಾಮಾಂತರ ಹಳ್ಳಿಗಳಿಗೆ ಕಿರು ನೀರು ಸರಬರಾಜು ಯೋಜನೆ

27(90) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ಗ್ರಾಮಾಂತರ ಹಳ್ಳಿಗಳಲ್ಲಿ ನೀರಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹೊಸ ಬೋರ್‌ಗಳನ್ನು ಹಾಕಲು ಗುರುತಿಸಿರುವ ಹಳ್ಳಿಗಳು ಯಾವುವು;

ಇ) ಕಿರುನೀರು ಸರಬರಾಜು ಕೇಳಿ ಬಂದಿರುವ ಹಳ್ಳಿಗಳಾವುವು ಪೂರ್ಣ ವಿವರ ಕೊಡುವುದು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು) :

ಅ) ತುರುವೇಕೆರೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಇ) ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಅನುಬಂಧ -1

(ವಿಧಾನ ಸಭೆ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 90ರ ಉತ್ತರದ ಲಗತ್ತು)

ಕೊಳವೆ ಬಾವಿ ಕೊರೆಯಲು ಗುರುತಿಸಿರುವ ಗ್ರಾಮಗಳು		ಕಿರುನೀರು ಸರಬರಾಜಿಗಾಗಿ ಬೇಡಿಕೆ ಬಂದಿರುವ
2002-03ನೇ ಸಾಲಿನ ಕ್ರಿಯಾ ಯೋಜನೆಯಡಿ ಸೇರಿರುವ ಗ್ರಾಮಗಳು	ಅಭಾವ ಪರಿಹಾರ ಕಾರ್ಯಕ್ರಮದಡಿ ಮಂಜೂರಾಗಿರುವ ಗ್ರಾಮಗಳು	
ಕ್ರ.ಸ	ಕ್ರ.ಸ	ಕ್ರ.ಸ
1 ಅಮ್ಮಸಂದ್ರ	1 ಅಡವನಹಳ್ಳಿ ಗೊಲ್ಲರಹಟ್ಟಿ	1 ಬೆಂಕಿ ಕೆರೆ
2 ಮಲ್ಲದೇವನಹಳ್ಳಿ	2 ಲಕ್ಷ್ಮೀದೇವರ ಹಳ್ಳಿ	2 ತಾಳಕೆರೆಗೊಲ್ಲರಹಟ್ಟಿ
3 ಕಡೆಹಳ್ಳಿ ರಂಗನಾಥಸ್ವಾಮಿಬೆಟ್ಟ	3 ಅನೆಕೆರೆಪಾಳ್ಯ	3 ಒಬ್ಬೆನಾಗಸಂದ್ರ
4 ಚಿಮ್ಮನಹಳ್ಳಿ ಶನಿದೇವರ ದೇವಸ್ಥಾನದ ಹತ್ತಿರ	4 ಸೋಮೇನಹಳ್ಳಿ ಎಕೆ ಕಾಲೋನಿ	4 ಮದ್ದನಹಳ್ಳಿ
5 ವಡವನಘಟ್ಟ	5 ದೊಡ್ಡಾಘಟ್ಟ ದೇವಸ್ಥಾನ ಮುಂಭಾಗ	5 ಮಂಗೀಕುಪ್ಪೆ
6 ವರಹಸಂದ್ರ ತಿಗಳರಹಟ್ಟಿ	6 ಕೆ. ಮಾವಿನಹಳ್ಳಿ ಎಕೆ ಕಾಲೋನಿ	6 ಪುಟ್ಟಮಾಗೀಹಳ್ಳಿ
7 ಬ್ಯಾಡರಹಳ್ಳಿ	7 ಅಲದಹಳ್ಳಿ ಪಿಡಬ್ಲ್ಯೂಡಿ ರಸ್ತೆ ಪಕ್ಕ	7 ಚಿಕ್ಕಮಲ್ಲಿಗೆರೆ

1	2	3
8 ಕುರುಬರಹಳ್ಳಿ (ಚಿಮ್ಮನಹಳ್ಳಿ)	8 ವಿಠಲದೇವರಹಳ್ಳಿ ಹಿಪ್ಪೆಮರದಪಕ್ಕ	8 ಮಲ್ಲಾಘಟ್ಟ
9 ಚಿಂಡೂರು	9 ಲಕ್ಷಸಂದ್ರ	9 ದುಮ್ಮನಹಳ್ಳಿ
10 ಡಿ. ಬೆಸೂರು	10 ಗೊರಮರ ನಾರಾಯಣ ಗೌಡರ ಮನೆ ಹತ್ತಿರ	10 ಕೆರೆಒಳಗೇರಹಳ್ಳಿ
11 ವರಹಸಂದ್ರ ತಿಗಳರಹಟ್ಟಿ	11 ರಾಮಸಾಗರ ಹರಿಜನ ಕಾಲೋನಿ	11 ಹೊನ್ನೇನಹಳ್ಳಿ
12 ದೊಡ್ಡೇನಹಳ್ಳಿ ಗೊ.ಹಟ್ಟಿ	12 ಮಂತ್ರಿಕನಹಳ್ಳಿ ಊರ ಪಕ್ಕ	12 ದೇವಿಹಳ್ಳಿ
13 ತೊರೆ ಮಾವಿನಹಳ್ಳಿ ರೇಣುಕ ದೇವಸ್ಥಾನದ ಬಳಿ	13 ಸಿಂಗಸಂದ್ರ (ಪ್ರಾ.ಶ.ಅ)	13 ಹೆಡಗೀಹಳ್ಳಿ
14 ವಡವನಘಟ್ಟ ಹೊಸ ಬಡಾವಣೆ	14 ತಳವಾರನಹಳ್ಳಿ ಕೆಂಪಯ್ಯನ ಮನೆ ಹತ್ತಿರ	14 ತೂಬಿನಕಟ್ಟೆ
15 ಕಡೆಹಳ್ಳಿ ರಂಗನಾಥಸ್ವಾಮಿ ಬಳಿ	15 ಸಂಪಿಗೆ ಹೊಸಹಳ್ಳಿ ಬಸ್ ನಿಲ್ದಾಣ ಹತ್ತಿರ	15 ಚಿಕ್ಕತುರುವೇಕೆರೆ
	16 ಎಕೆ ಕಾಲೋನಿ ಹುಲ್ಲೇಕೆರೆ	16 ಸುಸಲು
	17 ಸಾಸಲು ಎಕೆ ಕಾಲೋನಿ	17 ಸೋಪನಹಳ್ಳಿ
	18 ಅರಸಮ್ಮನ ದೇವಸ್ಥಾನದ ಹತ್ತಿರ	18 ಜಕ್ಕನಹಳ್ಳಿ
	19 ಹೆಡಿಗೇಹಳ್ಳಿ ಸಾಮಿಲ್ ಪಕ್ಕ	19 ನೇರಲಕಟ್ಟೆ
	20 ದಬ್ಬೇಘಟ್ಟ ಎಕೆ ಕಾಲೋನಿ	20 ಕಳ್ಳನಕೆರೆ
	21 ದೊಡ್ಡಬಡಾವಣೆ ಹರಿಜನ ಕಾಲೋನಿ	21 ಚಿಕ್ಕೋನಹಳ್ಳಿ
	22 ವರಾಹಸಂದ್ರ ಹರಿಜನ ಕಾಲೋನಿ	22 ಕಬ್ಬೇಪಾಳ್ಯ (ವಡ್ಡರಹಟ್ಟಿ)
	23 ಚಿಕ್ಕಶೆಟ್ಟಿಗೆರೆ	23 ಹರಳಹಳ್ಳಿ
	24 ಮೇಲಿನ ವಳಗೇರಹಳ್ಳಿ ಎಕೆ ಕಾಲೋನಿ	24 ಚಿಕ್ಕಮಲ್ಲಿಗೆ
	25 ಮೇಲಿನ ವಳಗೇರಹಳ್ಳಿ ಮುಸ್ಲಿಂ ಕಾಲೋನಿ	25 ಕೆ. ದೊಡ್ಡೇರಿ
	26 ಕೆ. ಹೊಸಹಳ್ಳಿ ಬೀರದೇವರ ದೇವಸ್ಥಾನದ ಹತ್ತಿರ	26 ಸೊಂಡೆ ಮಾರ್ಗೋನಹಳ್ಳಿ
	27 ಹನುಮಾಪುರ ಊರ ಮುಂಭಾಗ	27 ಜಿ. ಮಂಚೇನಹಳ್ಳಿ
	28 ಆದಿತ್ಯಪಟ್ಟಣ	
	29 ಗಿರೇನಹಳ್ಳಿ ಬೆಲವತ್ತ ಮರದ ಬಳಿ	
	30 ಹೆಗ್ಗೆರೆ ಜನತಾ ಕಾಲೋನಿ	

1	2	3
	31 ಬೀಗೇನಹಳ್ಳಿ ಜೆಹೆಚ್‌ಸಿ 32 ಭುವನಹಳ್ಳಿ ಗುಡಿ ಗೌಡರ ಮನೆ ಹತ್ತಿರ 33 ಅಲದಹಳ್ಳಿ ಮಜರೆಗೋಪಾಲಪುರ 34 ಕೊಂಡಜ್ಜಿ ಬಸ್ ಸ್ಟಾಂಡ್ ಪಶ್ಚ 35 ಸೋಪನಹಳ್ಳಿ ಬೋಜಯ್ಯನ ಮನೆ ಪಕ್ಕ	

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ : ಮಾನ್ಯ ಅಧ್ಯಕ್ಷರೆ ಇಡೀ ರಾಜ್ಯ ಇವತ್ತು ಬರಗಾಲದಿಂದಾಗಿ ತತ್ತರಿಸುತ್ತಿರುವ ಸಂದರ್ಭದಲ್ಲಿ ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆನ್ನುವುದು ಕಳೆದ ನಾಲ್ಕೈದು ಅಧಿವೇಶನದಿಂದಲೂ ಕೂಡ ಎಲ್ಲಾ ಸದಸ್ಯರ ಅಭಿಪ್ರಾಯವಾಗಿದೆ. ಅದೇ ರೀತಿ ನಾನೂ ಕೂಡ ನನ್ನ ಕ್ಷೇತ್ರದ ಹಳ್ಳಿಗಳಲ್ಲಿ ಓಡಾಡುವಾಗ ನೀರಿನ ಸಮಸ್ಯೆ ಬಂದಾಗ ಅಧಿಕಾರಿಗಳಿಗೆ ಆ ಗ್ರಾಮಗಳಿಗೆ ಬೋರ್‌ವೆಲ್ ಹಾಕಬೇಕೆಂದು ಪ್ರಸ್ತಾವನೆ ಕಳುಹಿಸಿದರು ಕೂಡ ಇದುವರೆವಿಗೂ ಕೂಡ ಎರಡು ವರ್ಷಗಳಿಂದ ಕನಿಷ್ಠ ಒಂದು ಬೋರ್‌ವೆಲ್ ಹಾಕಲು ಸಹ ಸರ್ಕಾರ ಪ್ರಯತ್ನ ಮಾಡಲಿಲ್ಲ. ತುಮಕೂರು ಜಿಲ್ಲೆಯ ತುರುವೆಕೆರೆ ತಾಲ್ಲೂಕಿಗೆ ಕುಡಿಯುವ ನೀರಿನ ಸಮಸ್ಯೆ ಎಷ್ಟಿದೆ ಎಂದರೆ 50 ಹಳ್ಳಿಗಳಿಗೆ ಬೋರ್ ಹಾಕಲು ಸುಮಾರು 27 ಹಳ್ಳಿಗಳಿಗೆ ಕಿರುನೀರು ಸರಬರಾಜು ಮಾಡಬೇಕೆಂದು ಸರ್ಕಾರವೇ ಉತ್ತರವನ್ನು ಕೊಟ್ಟಿದೆ. ಆದರೆ ನನ್ನ ದೃಷ್ಟಿಯಿಲ್ಲಿ ಸುಮಾರು 91 ಹಳ್ಳಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದೆ, ಸುಮಾರು 47 ಹಳ್ಳಿಗಳಿಗೆ ಕಿರುನೀರು ಸರಬರಾಜು ಯೋಜನೆಯಾಗಬೇಕಾಗಿದೆ ಎಂದು ಉಲ್ಲೇಖ ಮಾಡಿ ಹಿಂದಿನ ಅಧಿವೇಶನದಲ್ಲಿ 24.3.2001 ರಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿರುವ ಮಾನ್ಯ ಪೋರ್ಪಡೆಯವರಿಗೆ ನಮ್ಮ ಹಿಂದಿನ ಜಿಲ್ಲಾ ಮಂತ್ರಿಗಳಾದ ಜಯಚಂದ್ರರವರಿಗೆ, ಉನ್ನತ ಶಿಕ್ಷಣ ಸಚಿವರಾಗಿರುವ ಡಾ|| ಪರಮೇಶ್ವರವರಿಗೆ ಪತ್ರಗಳನ್ನು ಬರೆದಿದ್ದೇನೆ, ಆದರೆ ಇದುವರೆವಿಗೂ ಕೂಡ ಆ ಪತ್ರಕ್ಕೆ ಉತ್ತರ ಬರಲಿಲ್ಲ. ಸಂಬಂಧಪಟ್ಟ ಕಛೇರಿಗೆ ಹೋಗಿ ಈ ಬಗ್ಗೆ ಸಂಪರ್ಕಿಸಿದರೂ ಕೂಡ ಆ ಬಗ್ಗೆ ಯಾವುದೇ ಪತ್ರ ನನಗೆ ಬಂದಿಲ್ಲ. ಈ ಸಾರಿ ಕೂಡ ಜಿಲ್ಲಾ ಪಂಚಾಯತಿಯಲ್ಲಿ ಒಂದು ತಾಲ್ಲೂಕಿಗೆ ಎರಡು ಬೋರ್ ಕೊಟ್ಟಿದ್ದಾರಷ್ಟೆ ಸಾವಿರಾರು ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗೆ ಕೊಡುತ್ತೇವೆಂದು ಅನೇಕ ಕಡೆ ಹೇಳುತ್ತಿದೆ. ಆದುದರಿಂದ ಮಾನ್ಯ ಸಚಿವರು ತಕ್ಷಣ ಏನು ಕ್ರಮ ತೆಗೆದುಕೊಳ್ಳುತ್ತಾರೆ, ತೆಗೆದುಕೊಳ್ಳುತ್ತಾರೆಯೋ ಇಲ್ಲವೊ ಕುಡಿಯುವ ನೀರಿಗೆ ಯಾವ ರೀತಿಯಾದಂತಹ ವ್ಯವಸ್ಥೆ ಮಾಡುತ್ತಾರೆ ಎಂಬುದನ್ನು ಹೇಳಬೇಕು.

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಸದಸ್ಯರ ನೂರು ಪ್ರಶ್ನೆಗೆ ವಿವರವಾದ ಉತ್ತರವನ್ನು ಕೊಟ್ಟಿದ್ದೇನೆ. ಇದಕ್ಕೆ ಒಂದು ನಾರ್ಮ್ಸ್ ಇದೆ, ಯಾವ ಗ್ರಾಮಗಳಲ್ಲಿ ಜನಸಂಖ್ಯೆ 500 ಕ್ಕಿಂತ ಕಡಿಮೆ ಇರುವ ಕಡೆ ಬೋರ್ ಕೊಡುತ್ತೇವೆ, 500-1000 ಜನಸಂಖ್ಯೆ ಇರುವೆಡೆ ಕಿರುನೀರು ಸರಬರಾಜು ಯೋಜನೆ ಅಳವಡಿಸುತ್ತೇವೆ. 1000ಕ್ಕಿಂತ ಮೇಲ್ಪಟ್ಟು ಜನಸಂಖ್ಯೆ ಇರುವ ಗ್ರಾಮಗಳಿಗೆ ಪೈಪ್‌ಡ್ ವಾಟರ್ ಕೊಡುವ ಒಂದು ಗೈಡ್‌ಲೈನ್ಸ್ ಅನ್ನು

ಸರ್ಕಾರದ-ವತಿಯಿಂದ ಹಾಕಿಕೊಂಡಿದ್ದೇವೆ. ಈ ತಾಲ್ಲೂಕಿನಲ್ಲಿ 71 ಗ್ರಾಮಗಳು 500-1000 ಜನಸಂಖ್ಯೆ ಇರುವ ಗ್ರಾಮಗಳಾಗಿವೆ ಅದಾಗ್ಯೂ ಈ ತಾಲ್ಲೂಕಿನಲ್ಲಿ ಕಿರುನೀರು ಸರಬರಾಜು ಯೋಜನೆಯನ್ನು ಮಾಡಿಕೊಟ್ಟಿದ್ದೇವೆ. ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ 20 ಕಾಮಗಾರಿಗಳು ಕ್ರಿಯಾಯೋಜನೆಯಲ್ಲಿ ಮುಂದುವರೆದಿವೆ. ಅದಕ್ಕಾಗಿಯೇ ಆ ತಾಲ್ಲೂಕಿಗೆ 47.22 ಲಕ್ಷ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದೇವೆ. ಉಳಿದವುಗಳನ್ನು ಮಾಡಬೇಕೆಂದರೆ ಮುಂದಿನ ವರ್ಷದ ಕ್ರಿಯಾಯೋಜನೆಯಲ್ಲಿ ಸೇರಿಸಿ ಅನುದಾನವನ್ನು ನೋಡಿಕೊಂಡು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆ. ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳಲಿಚ್ಚಿಸುತ್ತೇನೆ, ಕುಡಿಯುವ ನೀರಿನ ಸಮಸ್ಯೆ ದೊಡ್ಡ ಸಮಸ್ಯೆ, ಕೇವಲ ಈ ಬೋರ್‌ವೆಲ್‌ಗಳನ್ನು ಹಾಕುವುದರಿಂದ ಈ ಸಮಸ್ಯೆ ಪರಿಹಾರವಾಗುತ್ತದೆ ಎಂದು ತಿಳಿದುಕೊಂಡಿದ್ದಾರೆ ತಪ್ಪು. ನಾವು ಎಲ್ಲಿಯವರೆಗೆ ಭೂಮಿಯಲ್ಲಿ ನೀರಿನ ಸಂಗ್ರಹಣೆಯನ್ನು ಹೆಚ್ಚು ಮಾಡುವುದಿಲ್ಲ ಮಳೆಯ ನೀರು ಭೂಮಿಯಲ್ಲಿ ಇಂಗತಕ್ಕಂಥ ವ್ಯವಸ್ಥೆಯನ್ನು ಹೆಚ್ಚು ಮಾಡುವುದಿಲ್ಲ ಅಲ್ಲಿಯವರೆಗೆ ಈ ಬೋರ್ ಹಾಕುವುದರಿಂದ ಉಪಯೋಗ ಹೆಚ್ಚಾಗುವುದಿಲ್ಲ. ನಮ್ಮ ರಾಜ್ಯದಲ್ಲಿ ಶೇಕಡ 16ರಷ್ಟು ಮಳೆಯನ್ನು ನೀರನ್ನು ಉಪಯೋಗ ಮಾಡುತ್ತೇವೆಯೆ ಹೊರತು ಉಳಿದ ಶೇಕ 84 ರಷ್ಟು ಮಳೆಯ ನೀರು ಹೊಳೆ ಇತ್ಯಾದಿಗಳ ಮೂಲಕ ಸಮುದ್ರಕ್ಕೆ ಸೇರುತ್ತಿದೆ. ಇದಕ್ಕೆ ಒಂದು ಯೋಜನೆಯನ್ನು ಮಾಡಿದಾಗ ಮಾತ್ರ ವಾಟರ್ ಲೇವೆಲ್ ಮೇಲೆ ಬಂದು ಈ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗುತ್ತದೆ. ಈ ದಿಶೆಯಲ್ಲಿ ಸರ್ಕಾರ ಗಹನವಾಗಿ ವಿಚಾರ ಮಾಡುತ್ತಿದೆ, ಅನೇಕ ಯೋಜನೆಗಳ ಮುಖಾಂತರ ತುರುವೇಕೆರೆಯ ಸಮಸ್ಯೆಯನ್ನು ಕೂಡ ಬಗೆಹರಿಸಲು ನಾನು ಪ್ರಯತ್ನ ಮಾಡುತ್ತೇನೆ. ಮತ್ತೆ ತಮಗೆ ಪತ್ರ ಬಂದಿಲ್ಲವೆಂದು ಹೇಳಿದ್ದಿರಿ, ಇವತ್ತೇ ಆ ಪತ್ರವನ್ನು ತರಿಸಿ ಪರಿಶೀಲನೆ ಮಾಡಿ ತಮಗೆ ಉತ್ತರವನ್ನು ಕೊಡುತ್ತೇನೆ ಎಂದು ಹೇಳಬಯಸುತ್ತೇನೆ.

ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ : ಮುಂದಿನ ವರ್ಷದ ಕ್ರಿಯಾಯೋಜನೆಯಲ್ಲಿ ಸೇರಿಸಿ ಅನುದಾನವನ್ನು ನೋಡಿಕೊಂಡು ಕಾರ್ಯಕ್ರಮ ಹಾಕಿಕೊಳ್ಳುತ್ತೇವೆಂದು ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ, ಏಪ್ರಿಲ್‌ವರೆಗೆ ಕುಡಿಯಲು ನೀರಿಲ್ಲದೆ ಜನರು ಸುಮ್ಮನಿರಲಾಗುತ್ತದೆಯೆ ನೀವೇ ಹೇಳಿ? ಇಲ್ಲಿ ಕುರಿ ಕಾಯಲು ಎಂಎಲ್‌ಗಳು ಬರಬೇಕೆ? ಈಗಾಗಲೇ ಡಿ.ಸಿಗಳಿಗೆ ಎರಡು ಮೂರು ಕೋಟಿ ರೂಪಾಯಿಗಳ ಹಣ ಬಿಡುಗಡೆ ಮಾಡಿದ್ದೇವೆ, ಬೋರ್ ಕೊರೆಸಿಕೊಳ್ಳಿ ಎಂದು ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ : ಇದು ನಮ್ಮ ಎಲ್ಲಾ ಶಾಸಕರ ಪ್ರಶ್ನೆಯಾಗಿದೆ. ಇದಕ್ಕೆ ಅರ್ಧಗಂಟೆ ಚರ್ಚೆಗೆ ದಯಮಾಡಿ ಅವಕಾಶ ಕೊಡಬೇಕು. ಇದರ ಬಗ್ಗೆ ಶೀಘ್ರವಾಗಿ ಚರ್ಚೆಯಾಗಬೇಕು.

ಅಧ್ಯಕ್ಷರು : ಆಗಬಹುದು. ದಯವಿಟ್ಟು ಬರೆದು ಕಳುಹಿಸಿ. ನಾನು ಅಲೋ ಮಾಡುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ :- ಸನ್ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಪ್ರಶ್ನೆ ಕೇಳಿಲ್ಲ. ತುರುವೇಕೆರೆ ತಾಲ್ಲೂಕಿನ ಗ್ರಾಮಾಂತರ ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಎಂದು

ಹೇಳಿದ್ದಾರೆ. ನಿರ್ದಿಷ್ಟವಾಗಿ ಎಲ್ಲಿ ತೊಂದರೆ ಇದೆ ಎನ್ನುವ ಬಗ್ಗೆ ಬರೆದುಕೊಡಿ. ಅಲ್ಲಿ ತಕ್ಷಣವೇ, ಅಂದರೆ 24 ಗಂಟೆಗಳಲ್ಲಿ ಕುಡಿಯುವ ನೀರು ಕೊಡತಕ್ಕಂಥ ವ್ಯವಸ್ಥೆಯನ್ನು ನಾನು ಮಾಡುತ್ತೇನೆ. ಅದನ್ನು ಬಿಟ್ಟು, ಇಡೀ ತಾಲ್ಲೂಕಿನಲ್ಲಿ ನೀರಿನ ಅಭಾವವಿದೆ ಎಂದು ಜನರಲ್ ಆಗಿ ಕೇಳಿದರೆ ನಾನು ಹೇಗೆ ಉತ್ತರ ಕೊಡಲಿ. ಅದಕ್ಕೆ ಜನರಲ್ ಉತ್ತರ ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರ ಪ್ರಶ್ನೆಯಲ್ಲಿ, ಇಂಥಿಂಥ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವವಿದೆ, ತಕ್ಷಣ ಕುಡಿಯುವ ನೀರನ್ನು ಒದಗಿಸಬೇಕು, ಕೊಳವೆ ಬಾವಿಗಳು ಬೇಕು, ಬೋರ್‌ವೆಲ್‌ಗಳು ಬೇಕು ಎಂದು ನಿರ್ದಿಷ್ಟವಾಗಿಲ್ಲ. ಸ್ಪೆಸಿಫಿಕ್ ಆಗಿ ಕೇಳಿದ್ದರೆ ನಾನು ತಕ್ಷಣ ಉತ್ತರಕೊಟ್ಟು ಅದಕ್ಕೆ ವ್ಯವಸ್ಥೆಯನ್ನು ಮಾಡುತ್ತಿದ್ದೆ. ತುರುವೇಕೆರೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಎನ್ನತಕ್ಕಂಥಾದ್ದರ ಬಗ್ಗೆ ಮಾತ್ರ ನಾನು ವಿವರಗಳನ್ನು ಕೊಟ್ಟಿದ್ದೇನೆ. ಯಾವ ಗ್ರಾಮಗಳಿಗೆ ತುರ್ತಾಗಿ ಕುಡಿಯುವ ನೀರಿನ ವ್ಯವಸ್ಥೆ ಬೇಕು ಎನ್ನುವುದನ್ನು ಮಾನ್ಯ ಸದಸ್ಯರು ಬರೆದು ಕೊಡಲಿ. ತಕ್ಷಣ ಅದರ ವ್ಯವಸ್ಥೆಯನ್ನು ಮಾಡತಕ್ಕಂಥ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ಹೇಳಲು ಇಚ್ಛಿಪಡುತ್ತೇನೆ.

ಶ್ರೀ ಎಂ.ಡಿ ಲಕ್ಷ್ಮೀನಾರಾಯಣ :- ತಕ್ಷಣವೇ ಕ್ರಮ ತೆಗೆದುಕೊಳ್ಳುತ್ತೇನೆಂದರು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳು. ಆದರೆ ಅಭಾವ ಪರಿಹಾರ ಕಾರ್ಯಕ್ರಮದಡಿಯಲ್ಲಿ ಮಂಜೂರಾಗಿರುವ ಗ್ರಾಮಗಳು 35 ಎನ್ನುವ ಮಾತನ್ನು ಮಂತ್ರಿಗಳು ಹೇಳಿದ್ದಾರೆ. ಈ 35 ಗ್ರಾಮಗಳನ್ನು ಸುಮಾರು ಒಂದೂವರೆ ವರ್ಷಗಳ ಹಿಂದೆಯೇ ಗುರುತಿಸಲಾಗಿದೆ. 24 ಗಂಟೆಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಈಗಾಗಲೇ ಮಂಜೂರಾಗಿರುವ 35 ಗ್ರಾಮಗಳಿಗೆ ದಯಮಾಡಿ 24 ಗಂಟೆಗಳೊಳಗೆ ಕುಡಿಯುವ ನೀರನ್ನು ಒದಗಿಸಲು ಕ್ರಮ ತೆಗೆದುಕೊಂಡರೆ ತಮ್ಮ ಮೂಲಕ ಅವರಿಗೆ ನಾನು ಅನೇಕಾನೇಕ ವಂದನೆಗಳನ್ನು ನಮ್ಮ ತಾಲ್ಲೂಕಿನ ಜನರ ಪರವಾಗಿ ಅರ್ಪಿಸುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ :- ಸನ್ಮಾನ್ಯ ಅಧ್ಯಕ್ಷರೇ, ನಾನು ಹೇಳಿದ್ದು ನಿಜ. ಸನ್ಮಾನ್ಯ ಸದಸ್ಯರು ಗಮನಕ್ಕೆ ತೆಗೆದುಕೊಳ್ಳಬೇಕು, ಮಂಜೂರಾಗಿರುವ ಗ್ರಾಮಗಳ ವಿವರಗಳನ್ನು ನಾನು ಹೇಳಿದ್ದೇನೆ. ಇವುಗಳಲ್ಲಿ ಯಾವ ಗ್ರಾಮಗಳಲ್ಲಿ ಕಾರ್ಯ ಪ್ರಾರಂಭವಾಗಿಲ್ಲ ಎನ್ನುವುದನ್ನು ನನ್ನ ಗಮನಕ್ಕೆ ತಂದದ್ದಾದರೆ ನಾನು ತಕ್ಷಣವೇ ಕ್ರಮ ತೆಗೆದುಕೊಳ್ಳುತ್ತೇನೆ.

ತೀರ್ಥಹಳ್ಳಿಯ ತುಂಗಾ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಂದ ವಸೂಲು ಮಾಡುತ್ತಿರುವ ಶುಲ್ಕದ ಬಗ್ಗೆ

28(95) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯಲ್ಲಿರುವ ತುಂಗಾ ಮಹಾ ವಿದ್ಯಾಲಯಕ್ಕೆ ಸರ್ಕಾರ ವಾರ್ಷಿಕ ನೀಡುವ ಅನುದಾನವೆಷ್ಟು; ಪ್ರತೀ ವರ್ಷವೂ ನಿಗದಿಪಡಿಸಿದ ಅನುದಾನ ಬಿಡುಗಡೆಯಾಗುತ್ತಿದೆಯೇ; ಈ ಅನುದಾನವನ್ನು ಯಾವ ಬಾಬುಗಳಿಗಾಗಿ ಬಿಡುಗಡೆ ಮಾಡಲಾಗಿದೆ.